**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ.**

**ಸಿ.ಸಿ ಸಂಖ್ಯೆ :: 276/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಮುಸ್ತಾಕ್ | **PW-03** |
| **ತಂದೆಯ ಹೆಸರು** | : | ಮಹಮದ್ ಅಲಿ | **CW-09** |
| **ವಯಸ್ಸು** | : | 25 ವರ್ಷ | |
| **ಉದ್ಯೋಗ** | : | ಚಾಲಕ | |
| **ವಾಸಸ್ಥಳ** | : | ಅಡ್ಡಗದ್ದೆ, ಶೃಂಗೇರಿ ತಾ. | |

**ದಿನಾಂಕಃ05-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ದಿಃ24-06-2025 ರಂದು ಪೋಲೀಸಿನವರು ದಿಃ 23-06-2025 ರಂದು ಸಂಭವಿಸಿದ ರಸ್ತೆ ಅಪಘಾತದ ವಿಚಾರವಾಗಿ ಸ್ಥಳ ಪಂಚನಾಮೆ ಮಾಡಲು ಅಡ್ಡಗದ್ದೆಯಲ್ಲಿರುವ ಎ.ಒನ್ ಚಿಪ್ಸ್ ಅಂಗಡಿಯ ಬಳಿ ಬಂದಿದ್ದರು. ಆ ಸಂದರ್ಭದಲ್ಲಿ ನನ್ನನ್ನು ಪಂಚ ಸಾಕ್ಷಿದಾರನಾಗಿ ಸಹಕರಿಸಲು ನನಗೆ ಮೌಖಿಕವಾಗಿ ತಿಳಿಸಿದರು. ಆ ಸಂದರ್ಭದಲ್ಲಿ ಚಾಸಾ-8, ಚಾಸಾ-10 ಮತ್ತು ಚಾಸಾ-1 ರವರು ಹಾಜರಿದ್ದರು. ಚಾಸಾ-8 ರವರು ತೋರಿಸಿದಂತೆ ಅಪಘಾತವಾದ ಸ್ಥಳವನ್ನು ಪೋಲೀಸಿನವರು ನಮ್ಮ ಸಮಕ್ಷಮ ಸ್ಥಳದಲ್ಲಿಯೇ ಸ್ಥಳ ಪಂಚನಾಮೆಯನ್ನು ಬರೆದುಕೊಂಡರು. ಅದೇ ಸಂದರ್ಭದಲ್ಲಿ ಪೋಲೀಸರು ಸ್ಥಳದಲ್ಲಿಯೇ ಬಿದ್ದಿದ್ದ ಮೃತ ಮಹಮದ್ ರವರ 1 ಜೊತೆ ಚಪ್ಪಲಿಯನ್ನು ಅಮಾನತು ಪಡಿಸಿಕೊಂಡರು. ಸದರಿ ಸ್ಥಳ ಮತ್ತು ಅಮಾನತು ಪಂಚನಾಮೆಯನ್ನು ಸಂಜೆ 6 ಗಂಟೆಯಿಂದ ಸಂಜೆ 7 ಗಂಟೆವರೆಗೂ ಪೋಲೀಸರು ದಾಖಲಿಸಿಕೊಂಡರು.

2. ಈಗ ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ-2 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಗಿರುತ್ತದೆ. ಅದೇ ಸಂದರ್ಭದಲ್ಲಿ ಪೋಲೀಸರು 2 ಭಾವ ಚಿತ್ರಗಳನ್ನು ತೆಗೆದುಕೊಂಡರು ಸಾಕ್ಷಿಯು ಸದರಿ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮೃತರ ಒಂದು ಜೊತೆ

ಚಪ್ಪಲಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು.)

**::ಪಾಟೀಸವಾಲು :: A P P ರವರಿಂದ ::**

ಈ ಪ್ರಕರಣದಲ್ಲಿ ಪಂಚಸಾಕ್ಷಿದಾರನಾಗಿ ಹಾಜರಾಗಲು ಪೋಲೀಸರು ನನಗೆ ನೋಟೀಸು ನೀಡಿದ್ದರು ಎಂದರೆ ಸರಿ. ನಾನು ಸದರಿ ನೋಟೀಸಿಗೆ ಸಹಿ ಮಾಡಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.H.R.U ವಕೀಲರಿಂದ ::**

ಪೋಲೀಸರು ನೋಟೀಸನ್ನು ನಮ್ಮ ಮನೆಗೆ ಬಂದು ನೀಡಿದ್ದರು. ಚಾಸಾ-1 ರವರು ಹೇಳಿದ್ದರಿಂದ ಪೋಲೀಸರು ನನಗೆ ನೋಟೀಸು ನೀಡಿರುತ್ತಾರೆ. ಚಾಸಾ-1 ಮತ್ತು ಚಾಸಾ-8 ರವರು ನನ್ನ ಸಂಬಂಧಿಕರು ಎಂದರೆ ಸರಿ. ಎ.ಒನ್ ಚಿಪ್ಸ್ ಅಂಗಡಿಯ ಮಾಲೀಕರ ಹೆಸರು ಶ್ರೀಕಾಂತ್. ಸದರಿ ಪ್ರಕರಣದಲ್ಲಿ ಮಹಜರ್ ದಾಖಲಿಸುವ ಸಂದರ್ಭದಲ್ಲಿ ಶ್ರೀಕಾಂತ್ ರವರು ಅಂಗಡಿಯಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಅಪಘಾತವಾದ ಸ್ಥಳಕ್ಕೆ ಎ.ಒನ್ ಚಿಪ್ಸ್ ಅಂಗಡಿ ಸಮೀಪದಲ್ಲಿ ಇದೆ ಎಂದರೆ ಸರಿ. ನಮ್ಮ ಮನೆ ಅಪಘಾತ ಸ್ಥಳದಿಂದ ದೂರದಲ್ಲಿದೆ ಎಂದರೆ ಸರಿ. ಮು.ಮಾ-1 ಮತ್ತು 2 ಚಪ್ಪಲಿಗಳು ರಸ್ತೆಯ ಬದಿಯಲ್ಲಿ ಜೋಡಿಸಿಟ್ಟಂತೆ ಇಡಲಾಗಿತ್ತು.

2. ನಾನು 8-9 ವರ್ಷಗಳಿಂದ ಚಾಲಕ ವೃತ್ತಿಯಲ್ಲಿದ್ದೇನೆ. ಹೈವೇ ರಸ್ತೆಗಳಲ್ಲಿ ವಾಹನಗಳು ವೇಗವಾಗಿ ಚಲಿಸುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಹೆದ್ದಾರಿ ರಸ್ತೆಗಳಲ್ಲಿ ರಸ್ತೆ ದಾಟಬೇಕಾದರೆ ರಸ್ತೆಯ ಎರಡೂ ಬದಿಗಳಲ್ಲಿ ವಾಹನ ಬರುತ್ತಿರುವ ವಿಚಾರವನ್ನು ಗಮನಿಸಿ ತದ ನಂತರ ರಸ್ತೆ ದಾಟಬೇಕಾಗಿರುತ್ತದೆ ಎಂದರೆ ಸರಿ. ನಿಪಿ-2 ಮಹಜರ್ ಗೆ ನಾನು ಓದಿ ಅರ್ಥ ಮಾಡಿಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿರುವ ನಕ್ಷೆಯನ್ನು ಸಹ ನಾನು ತಿಳಿದುಕೊಂಡಿರುತ್ತೇನೆ. ನಿಪಿ-2 ರಲ್ಲಿರುವ ನಕ್ಷೆಯಂತೆ ಮಹಮದ್ ರವರಿಗೆ ಅಪಘಾತ ಟಾರ್ ರಸ್ತೆಯ ಮೇಲೆ ಕೃತ್ಯ ಸಂಭವಿಸಿರುತ್ತದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ಮತ್ತು ಚಾಸಾ-8 ರವರು ನನ್ನ ಸಂಬಂಧಿಕರು

ಆಗಿರುವುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಪ್ರಕರಣದಲ್ಲಿ ನಾನು ನಿಪಿ -2 ಕ್ಕೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ ಈ ದಿನ ನ್ಯಾಯಾಲಯದಲ್ಲಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.